ಅಂದುಕೊಂಡಿದ್ದರು. ಮಸ್ತಾನ್ ನಿಜವಾಗೂ ನಖ್ರ ಮಾಡ್ತಿದ್ದಾನೆ ಅನ್ನಿಸಿತಲ್ಲದೆ ಸಿಟ್ಟೂ ಬಂತು. ಆದರೆ, ಇದು ಸಿಟ್ಟು ಮಾಡಿಕೊಳ್ಳೊ ಸಂದರ್ಭ ಅಲ್ಲ ಅಂತ ವಿವೇಕ ಎಚ್ಚರಿಸಿತು. ಏನಾದರೂ ಮಾಡಿ ಅವನನ್ನು ಒಪ್ಪಿಸಬೇಕು. ಪಿಡಿಓ ಬಂದ ಮೇಲೆ ಜೀಪು ಕಳಿಸಿ ಅವನನ್ನು ಕರೆಸಿಕೊಂಡು ಮಾತಾಡಬೇಕು... ಮಸ್ತಾನ್ ಕೆರೆಗೆ ಇಳಿಯಲ್ಲ ಅಂದ್ರೆ ಏನ್ ಮಾಡದು? ಅವನ್ನ ಬಿಟ್ಟರೆ ಇನ್ಯಾರಿದ್ದಾರೆ?

ತಕ್ಷಣ ಅವರಿಗೆ ಪಾಳ್ಯದ ಕಣುಮ ನೆನಪಾದ. ಈಚೆಗೆ ಅವನನ್ನು ನೋಡೇ ಇಲ್ಲ. ದೊಡ್ಡ ಕಣ್ಣುಗಳ ಒರಟುಮುಖದ ಜಾಲಿ ಕೊರಡಿನಂತ ಆಸಾಮಿ. ಗೊಲ್ಲಳ್ಳಿ ಕ್ರಾಸ್ ಹತ್ರ ಜುವ್ವೆ ಮರದ ನೆರಳಲ್ಲಿ ಕುಂತು ಪಂಕ್ಚರ್ ಹಾಕುತ್ತಿದ್ದ ಅವನನ್ನು ಚೇರ್ಮನ್ನರು ಅವರು ಹಿರಿಯೂರಿಗೆ ಹೋಗುವಾಗ, ಬರುವಾಗ ನೋಡುತ್ತಿದ್ದರು. ಅವನು ಸ್ಕೂಟರು, ಮೋಟರ್‌ಸೈಕಲ್ ರಿಪೇರಿ ಮಾಡೋದನ್ನು ಕಲೀತೀನಿ ಅಂತ ಹಿಂದೂಪುರಕ್ಕೆ ಹೋದ ಅಂತಲೂ ಯಾರೋ ಹೇಳಿದ್ದರು. ಆ ಮೇಲೆ ಅವನು ಅಲ್ಲಿಂದ ಬಂದು ಅಮರಾಪುರದಲ್ಲಿ ಗ್ಯಾರೇಜು ಹಾಕ್ತೀನಿ ಅಂತ ಊರುಬಿಟ್ಟು ಹೋದ ಅನ್ನೋದೂ ಗೊತ್ತಾಗಿತ್ತು. ಗ್ಯಾರೇಜಿನಲ್ಲಿ ಲಾಸ್ ಆಯ್ತು ಅಂತ ಮತ್ತೆ ಪಾಳ್ಯಕ್ಕೆ ಬಂದಿದ್ದ. ಈಗಲೂ ಅವನು ಪಾಳ್ಯದಲ್ಲೇ ಇರಬೌದೇ? ಯಾರನ್ನು ಕೇಳಿದರೆ ಅವನ ವಿಷಯ ಗೊತ್ತಾಗಬಹುದು ಅಂತ ಯೋಚಿಸುತ್ತ ಕೂತಿದ್ದರು.

ಹತ್ತನ್ನೆರಡು ವರ್ಷಗಳ ಹಿಂದೆ ಅವನು ಚಿಲ್ಲಳ್ಳಿ ದೊಡ್ಡಕೆರೆಯಲ್ಲಿ ಮೀನು ಹಿಡಿದನೆಂದು ಊರವರು ಅವನನ್ನು ಕಂಬಕ್ಕೆ ಕಟ್ಟಿ ಹೊಡೆದಿದ್ದರು. ನೀರು ಮೈಲಿಗೆ ಆಯಿತೆಂದು ಇಡೀ ಕೆರೆಯನ್ನೇ ಖಾಲಿ ಮಾಡಿಸಿದ್ದು ಅವರಿಗೆ ನೆನಪಿದೆ. ಅವನನ್ನು ಕರೆಸಿ, ಕೆರೆಗೆ ಇಳಿಸಿ ಹೆಣಗಳನ್ನು ದಡಕ್ಕೆ ಎಳೆಸಿ ಹಾಕಿಸಬಹುದಲ್ಲ ಅಂತ ಅನ್ನಿಸಿತು. ಆದರೆ, ಅವನು ಎಲ್ಲಿದ್ದಾನೆ ಎಂಬುದೇ ಗೊತ್ತಿರಲಿಲ್ಲ. ಯಾರನ್ನು ಕೇಳಿದರೆ ಗೊತ್ತಾಗಬೌದು ಎಂದು ಯೋಚಿಸುತ್ತಿರುವಾಗಲೇ ಮನೆಯ ಮುಂದೆ ರಸ್ತೆಯಲ್ಲಿ ನಡಕೊಂಡು ಹೋಗುತ್ತಿದ್ದ ಕೆಂಜೆಡೆಯ ಅವರ ಕಣ್ಣಿಗೆ ಬಿದ್ದ.

ಅವರು ಎದ್ದು ಮನೆಯಿಂದ ಹೊರಕ್ಕೆ ಬರುವಷ್ಟರಲ್ಲಿ ಅವನು ಸಾಕಷ್ಟು ದೂರ ಹೋಗಿ ಬಿಟ್ಟಿದ್ದ. ಚೇರ್ಮನ್ನರು ಕೂಗಿದರೂ ಅವನಿಗೆ ಕೇಳಿಸಲಿಲ್ಲ. ಕೊನೆಗೆ ಜೋರಾಗಿ ಚಪ್ಪಾಳೆ ತಟ್ಟಿ ಅವನ ಗಮನ ಸೆಳೆದರು. ಹಿಂದಕ್ಕೆ ತಿರುಗಿ ನೋಡಿದ ಕೆಂಜೆಡೆಯ ಬಂದೆ ಇರಿ ಎಂದು ಸನ್ನೆ ಮಾಡುತ್ತ ಎದುರಿಗೆ ಬಂದು ನಿಂತ. ಏನು ಎನ್ನುವಂತೆ ಚೇರ್ಮನ್ನರ ಮುಖ ನೋಡಿದ.

'ಗೊಲ್ಲಳ್ಳಿ ಕ್ರಾಸ್ ಅತ್ರ ಪಂಕ್ಚರ್ ಅಂಗಡಿ ಹಾಕಿದ್ದನಲ್ಲ ಕಣುಮಪ್ಪ, ಎಲ್ಲಿ ಈಗ ಕಾಣ್ತ ಇಲ್ಲವಲ್ಲ. ಅವನು ಪಾಳ್ಯದಲ್ಲೇ ಇದಾನೊ' ಅಂತ ಕೇಳಿದರು. ಕೆಂಜೆಡೆಯ ಬೇಕಂತಲೇ ಯಾವ ಕಣುಮ ಎನ್ನುತ್ತ ಅವರ ಮುಖ ನೋಡಿದ. 'ಅದೇ ಪಾಳ್ಯದ ಮಣೆಗಾರ್ರ ಹುಡುಗ. ಪಂಕ್ಚರ್ ಹಾಕ್ತಿದ್ದನಲ್ಲೊ ಅವನು' ಅಂತ ಚೇರ್ಮನ್ನರು ಹೇಳಿದ ಮೇಲೆ, 'ಓ ಅವನಾ, ಅವನು ಸತ್ತು ಎರಡು ವರ್ಷ ಆದ್ವಲ್ಲ ಸ್ವಮೇ... ನಿಮ್‌ಗೆ ಗೊತ್ತಿಲ್ವ' ಎಂದು ಮರುಪ್ರಶ್ನೆ ಹಾಕಿದ. ಅಷ್ಟರಲ್ಲಿ ಪೋಸ್ಟ್‌ಬ್ಯಾಗು ತರುವ ವ್ಯಾನ್ ಬಂತು ಎನ್ನುತ್ತ ಸ್ಟ್ಯಾಂಡಿನ ಕಡೆಗೆ ಓಡಿದ. ಹೌದಲ್ಲ, ಅವನು ಸತ್ತಿರೋದು ನಂಗೆ ನೆನಪೇ ಆಗಲಿಲ್ಲವಲ್ಲ ಅಂದುಕೊಳ್ಳುತ್ತ ಮನೆಯೊಳಕ್ಕೆ ಬಂದರು.

ಗಂಟೆ ಎರಡಾಗುತ್ತ ಬಂದರೂ ಹೆಣಗಳನ್ನು ನೋಡಿ ಬರಲು ಹೋದ ರಾಜಣ್ಣ ಮತ್ತು ಪಿಡಿಓ ಬರಲಿಲ್ಲ. ಕೆರೆಯತ್ರ ಏನಾದರೂ ಸಮಸ್ಯೆ ಆಯ್ತೋ... ಇಲ್ಲ, ಜೀಪು ಕೆಟ್ಟು ಹೋಯ್ತೋ ಗೊತ್ತಾಗಲಿಲ್ಲವಲ್ಲ ಅಂತ ಪೇಚಾಡಿಕೊಳ್ಳುತ್ತ ಚೇರ್ಮನ್ನರು ಮನೆಯ ಅಂಗಳದಲ್ಲೇ ಅಡ್ಡಾಡುತ್ತ ಚಡಪಡಿಸಿದರು. ಮೂರ್ನಾಲ್ಕು ಸಲ ಗೇಟು ದಾಟಿ ರಸ್ತೆಯಲ್ಲಿ ನಿಂತು ನೋಡಿ ಬಂದರು. ಜೀಪಿನ ಸುಳಿವಿಲ್ಲ...